ತೊಳೆಯಬೇಕು, ದಿನದ ಬಟ್ಟೆ ಒಗೆಯಬೇಕು, ಯಾವುದನ್ನೂ ಮುಂದಕ್ಕೆ ಹಾಕಲಾಗದು.

ಯಾಕೋ ಚಿಕ್ಕಂದಿನಿಂದ ಇದೇ ಅಭ್ಯಾಸ. ದಿನದ ಕೊನೆಗೆ ನಿರಾಳವಾಗಿರಬೇಕು. ಈ ಶಿಸ್ತು ಮಧ್ಯಮವರ್ಗದ ಆರು ಮಕ್ಕಳಲ್ಲಿ ನಾಲ್ಕನೆಯವಳಾಗಿ ಹುಟ್ಟಿದ ನನಗೆ ಅನಿವಾರ್ಯವಾಗಿ ರೂಢಿಯಾಗಿತ್ತು. ಓದಿನಲ್ಲಿ ಸರಾಸರಿಯಾದರೂ ಪದವಿ ಪರೀಕ್ಷೆ ಮುಗಿಯುತ್ತಿದ್ದಂತೆ ಸ್ವಲ್ಪ ಶ್ರಮವಹಿಸಿ ಬ್ಯಾಂಕ್ ಪರೀಕ್ಷೆ ಬರೆದಿದ್ದೆ. ಅದೃಷ್ಟ ಚೆನ್ನಾಗಿತ್ತು. ಕೆಲಸ ಸಿಕ್ಕಿತ್ತು. ನನ್ನ ಮದುವೆಗೆ ಈ ನೌಕರಿಯೇ ಒಂದು ಅತಿರಿಕ್ತ ಅರ್ಹತೆಯಾಗಿತ್ತು. ಕಾಲೇಜು ಉಪನ್ಯಾಸಕ ರಿಷಿಯ ಮಡದಿಯಾಗಿ ಒಂದು ಮಗುವಿನ ತಾಯಿಯಾಗಿದ್ದೆ. 'ನನಗೆ ಇನ್ನೂ ಹೆಚ್ಚು ಓದುವ ಆಸೆ ಇದೆ' ಎಂದು ರಿಷಿ ಪಿಎಚ್.ಡಿ. ಮುಗಿಸಿದ್ದರು. ಅನಂತರವೂ ಓದುತ್ತಲೇ ಇದ್ದರು. ಇದು ನನ್ನ ಸ್ವಭಾವಕ್ಕೆ ತದ್ವಿರುದ್ಧ. ಮಗನೂ ಅಪ್ಪನಂತೆಯೇ ಜಾಣ. 'ದೆಹಲಿಯ ಪ್ರತಿಷ್ಠಿತ ವಿಶ್ವವಿದ್ಯಾಲಯದಲ್ಲಿ ಕಲಿಸುವ ಅವಕಾಶ ಬಂದಿದೆ' ಇವರು ಸಂಭ್ರಮಿಸಿದಾಗ, 'ಧಾರಾಳವಾಗಿ ಹೋಗಿಬನ್ನಿ' ಎಂದಿದ್ದೆ. ಯಾಕೋ ನನಗೆ ಹೋಗಲು ಮನಸ್ಸಿಲ್ಲ. ಮಗನಿಗೆ ಐಐಟಿಯಲ್ಲಿ ಸಿಕ್ಕಾಗ ಇವರ ಖುಷಿ ಹೇಳತೀರದು. 'ತಮ್ಮ ಮಗ' ಎಂಬ ಗರ್ವವನ್ನು ಎಲ್ಲರಲ್ಲೂ ಹಂಚಿಕೊಂಡಾಗಿತ್ತು.

ಆಗಲೂ ನನ್ನ ಪ್ರತಿಕ್ರಿಯೆ ಮನೆಯಲ್ಲಿ ಸಿಹಿ ಅಡುಗೆ ಮಾಡುವುದರಲ್ಲಿ ಮುಗಿದಿತ್ತು. ಒಂಥರಾ ವಿರಕ್ತಿ. ನನ್ನ ವೈಯಕ್ತಿಕ ಆಸೆಗಳನ್ನು ಎಂದಿಗೂ ಇವರ ಮುಂದೆ ತೆರೆದುಕೊಳ್ಳಬೇಕೆನ್ನಿಸಿರಲಿಲ್ಲ. ಮದುವೆಗೆ ಮುನ್ನ ಕಿಚಪಚ ಎಂದು ಅಕ್ಕಂದಿರ ಬಟ್ಟೆ, ಪುಸ್ತಕ, ಕೋಣೆ ಎಲ್ಲಾ ಶೇರ್ ಮಾಡಿದ್ದ ನನಗೆ, ಇಲ್ಲಿ ನೋಡಿದರೆ ಐಷಾರಾಮಿ ಜೀವನ. ನನ್ನ ಸಂಬಳವನ್ನೆಂದೂ ಕೇಳಿರಲಿಲ್ಲ. ಮನೆ ಖರ್ಚು, ಮಗನ ಓದಿನದು, ಹೀಗೆ ನಮ್ಮೆಲ್ಲ ಬೇಕುಬೇಡಗಳನ್ನು ಅವರೇ ನಿಭಾಯಿಸುತ್ತಿದ್ದರು. ಈಗಲೂ ಅಷ್ಟೇ, ಎರಡು ಮೂರು ತಿಂಗಳಿಗೊಮ್ಮೆ ನಾಲ್ಕು ದಿನ ಇದ್ದು ಹೋಗುವ ಮುನ್ನ, ಮನೆಯ ಎಲ್ಲ ಅಗತ್ಯಗಳನ್ನು ಪೂರೈಸುತ್ತಾರೆ. 'ಹಬ್ಬಕ್ಕೆ ಸೀರೆ ತೊಗೊ, ನನಗೆ ಸೆಲೆಕ್ಷನ್ ಗೊತ್ತಾಗೋಲ್ಲ, ಆಮೇಲೆ ರಾಜಿಯಾಗಿ ಉಡೋದು ಬೇಡ' ಎಂದು ದುಡ್ಡುಕೊಟ್ಟು ಹೋಗುತ್ತಾರೆ. ಹಾಗೆಂದು 'ಐ ಮಿಸ್ ಯು ವೆರಿ ಮಚ್' ತೆರನಾದ ಮೆದು ನುಡಿಗಳು ಎಂದಿಗೂ ಬಂದಿಲ್ಲ. ಪ್ರೀತಿ, ಪ್ರೇಮಗಳ ಕತೆ ಓದುವಾಗ, ಚಲನಚಿತ್ರಗಳನ್ನು ಪರದೆಯ ಮೇಲೆ ನೋಡುವಾಗ ರೊಮ್ಯಾಂಟಿಕ್ ಹಾಡುಗಳನ್ನು ಕೇಳುವಾಗ ಎಲ್ಲೋ ಚಿವುಟಿದಂತಾದರೂ ಅದನ್ನೇನು ದೊಡ್ಡದಾಗಿ ತೆಗೆದುಕೊಳ್ಳದೆ, ಆ ಆಸೆಗಳು ಮೊಳೆಯದಂತೆ ಹೊಸಕಿಬಿಟ್ಟಿದ್ದೇನೆ. ಪ್ರೀತಿಯ ಅಭಿವ್ಯಕ್ತಿ ಒಬ್ಬೊಬ್ಬರದು ಒಂದೊಂದು ಥರ ಎಂಬ ಸಮಾಧಾನ.

ದೆಹಲಿಗೆ ಹೋದಮೇಲೆ ನನ್ನಲ್ಲೂ ಸ್ವಲ್ಪ ಬದಲಾವಣೆ – ಎದ್ದ ಕೂಡಲೇ ಅವರಿಗೊಂದು ಗುಡ್ ಮಾರ್ನಿಂಗ್ ಮೆಸೇಜ್ ಹಾಕುವ ಅಭ್ಯಾಸ – ರಾತ್ರಿ ಗುಡ್ ನೈಟ್ ಅವರ ಕಡೆಯಿಂದ – ಹೀಗೆ ಕ್ಷೇಮಸಮಾಚಾರ ವಿನಿಮಯ. ಅಲ್ಲಿ ಅಡುಗೆ ತಿಂಡಿಗೆ ಮೆಸ್ ಇದ್ದರೂ ಮನೆಯೂಟ ಮಿಸ್ ಮಾಡ್ತಾರೆ ಎಂಬ ಕನಿಕರ ಇದ್ದೇ ಇದೆ. ಆದರೂ ಅದ್ಯಾಕೋ ನನಗೆ ಹೋಗಲು ಮನಸ್ಸಿಲ್ಲ. ಈ ಏಕಾಂತ ಪ್ರಿಯವಾಗಿಬಿಟ್ಟಿದೆ.

ಮಗ ಈ ಮಧ್ಯೆ ಬಂದು ಹೋಗಿದ್ದರೂ ಯಾಕೋ ಡಿಟ್ಯಾಚೆಡ್ ಆಗೇ ಇದ್ದ. ಪ್ರತಿಯೊಬ್ಬರಿಗೂ ಅವರದೇ ಆದ ಲೋಕ, ಕಮಿಟ್ಮೆಂಟ್. ಎಲ್ಲರೂ ಸ್ವತಂತ್ರರು. ಪರಸ್ಪರರ ಭಾವನೆಗಳನ್ನು ಗೌರವಿಸುವ ಮನೋಭಾವವಿರುವುದೇ ದೊಡ್ಡ ಉಡುಗೊರೆ. ಮೊನ್ನೆ ದೀಪಾವಳಿಗೆ ಮೂರೂ ಜನ ಒಟ್ಟಿಗೆ ಸೇರಿದ್ದು – ಒಂದಷ್ಟು ಸುತ್ತಾಡಿ, ಫೋಟೊ ತೆಗೆದು ಅಪ್ಪ ಮಗ ಇಬ್ಬರೂ ಸ್ಟೇಟಸ್ ಅಪ್‌ಡೇಟ್ ಮಾಡಿದ್ದರು. ನನಗೆ ಅದರಲ್ಲಿ ಆಸಕ್ತಿ ಇಲ್ಲ. ಈ ಬಾರಿ ದೆಹಲಿಗೆ ತೆರಳುವಾಗ,

'ನೀನೂ ಅಲ್ಲಿಗೇ ಬಂದರೆ ಎಷ್ಟು ಚಂದ' ಎಂದು ಮುತ್ತು ಉದುರಿಸಿದ್ದರು.